## ಆಲಿಯಾ ಮಾತೃಪರ್ವ

ಸ್ವಜನಪಕ್ಷಪಾತದ ಸುದ್ದಿಯ ಬೆನ್ನಿಗೇ ಆಲಿಯಾ ಭಟ್ 'ಮಮ್ಮಿ–ಬೇಬೀಸ್' ಡೇಔಟ್ ಕಥನವೊಂದು ವಿಡಿಯೊ ರೂಪದಲ್ಲಿ ಹರಿದಾಡಿದೆ.

ಅವರ ಮನೆಯ ವಿಶಾಲ ಕಾಂಪೌಂಡ್‌ನಿಂದ ಮೊನ್ನೆ ಮೊನ್ನೆ ಒಂದು ಐಷಾರಾಮಿ ಕಾರ್ ಹೊರಟಿತು. ಹಿಂದಿನ ಸೀಟಿನ ತೆರೆದ ಕಿಟಕಿಯತ್ತ ನೋಡಿದರೆ, ಆಲಿಯಾ ಭಟ್. ಅವರ ಮಡಿಲಲ್ಲಿ ಕಂದ ರಹಾ ಕಪೂರ್. ಗುಲಾಬಿ ಬಣ್ಣದ ದಿರಿಸಿನಲ್ಲಿ ಪುಟಾಣಿ ಮಿರ ಮಿರ್ರೆನ್ನುತ್ತಿತ್ತು. ಹಸಿರು ಸಲ್ವಾರ್ ಕಮೀಜ್ ತೊಟ್ಟಿದ್ದ ಆಲಿಯಾ ಫೋಟೊಗ್ರಾಫರ್ಸ್ ಕ್ಯಾಮೆರಾ ಕಣ್ಣು ತಮ್ಮಿಬ್ಬರತ್ತ ಬಿದ್ದಿದೆ ಎನ್ನುವುದನ್ನು ಖಾತರಿಪಡಿಸಿಕೊಂಡಿದ್ದೇ ಕಾರಿನ ಕಿಟಕಿಯ ಗಾಜನ್ನು ಮೇಲೇರಿಸಿದರು.

ಆಲಿಯಾ ಅದಾಗಲೇ ತಮ್ಮ ಮಗಳಲ್ಲಿ ಕಲಾಸಕ್ತಿ ಮೂಡಿಸಬೇಕೆಂದು ನಿರ್ಧರಿಸಿದ್ದಾರೆ. ಒಂದು ಪ್ರಕಾರದ ಸಂಗೀತ, ನೃತ್ಯ, ಕ್ರೀಡೆ ಇವುಗಳ ಪರಿಚಯ ಮಗಳಿಗೆ ಇರಬೇಕು ಎನ್ನುವುದು ತಾಯಿಯಾಗಿ ಅವರ ಬಯಕೆ. ಮುಂದೆ ಮಗಳು ಏನಾಗಲು ಇಷ್ಟಪಡುತ್ತಾಳೋ ಅದು ಬೇರೆ ಮಾತು. ಆದರೆ, ಕಲೆಯ ಯಾವುದಾದರೊಂದು ಪ್ರಕಾರದ ಪರಿಚಯ ಅವಳಿಗೆ ಇರಲೇಬೇಕು ಎನ್ನುವುದು ಕಲಾವಿದೆಯಾಗಿ ಅವರ ಇಚ್ಛೆ.

ಆಲಿಯಾ ಅಭಿನಯದ 'ಜಿಗ್ರಾ' ಹಿಂದಿ ಸಿನಿಮಾ ಅಕ್ಟೋಬರ್ 11ರಂದು ತೆರೆಕಾಣಲಿದ್ದು, ಅದರ ಪ್ರಚಾರಕಾರ್ಯದಲ್ಲಿಯೂ ಅವರು ತೊಡಗಿಕೊಂಡಿದ್ದಾರೆ. ■



# ಸ್ವಜನಪಕ್ಷಪಾತ ಸಮಸ್ಯೆಯಲ್ಲ ರಕುಲ್ ಪ್ರೀತ್ ಸಿಂಗ್



ರಕುಲ್ ಪ್ರೀತ್ ಸಿಂಗ್ ಒಂದು ಕಾಲದಲ್ಲಿ ದಕ್ಷಿಣ ಭಾರತದ ಸಿನಿಮಾಗಳಲ್ಲಿ ಎದ್ದುಕಂಡಿದ್ದ ಹೆಸರು. ತೆಲುಗು ಚಿತ್ರರಂಗದಲ್ಲಿ ಸ್ಟಾರ್ ನಟರ ಜತೆ ಪುಂಖಾನುಪುಂಖವಾಗಿ ಅಭಿನಯಿಸುವ ಅವಕಾಶ ಗಿಟ್ಟಿಸಿಕೊಂಡಿದ್ದವರು. ಅವರು ಹಿಂದಿ ಚಿತ್ರರಂಗದ ಮೋಹಕ್ಕೆ ಬಿದ್ದು, ಅತ್ತ ಜಿಗಿದರು. ಆದರೆ, ಆನಂತರದ ಅವರ ಸಿನಿಪಯಣ ಸುಖಕರವಾಗಿ ಇರಲಿಲ್ಲ. ಎಲ್ಲೋ ಅಲ್ಲೊಂದು ಇಲ್ಲೊಂದು ಎಂಬಂತೆ ಸಿನಿಮಾಗಳಲ್ಲಿ ಅವರು ನಟಿಸಿದರಷ್ಟೆ. ಮಾದಕದ್ರವ್ಯ ಜಾಲದಲ್ಲಿ ಅವರ ಹೆಸರು ಕೇಳಿಬಂದ ಮೇಲಂತೂ ಮಾರುಕಟ್ಟೆ ಇನ್ನಷ್ಟು ಕುಸಿಯಿತು.

ಅವರು ಇತ್ತೀಚೆಗೆ ಪಾಡ್‌ಕಾಸ್ಟ್ ಒಂದರಲ್ಲಿ ತಮ್ಮ ಜೀವನಾನುಭವವನ್ನು ಹೇಳಿಕೊಂಡರು. ಆಗ ಸ್ವಜನಪಕ್ಷಪಾತದ ವಿಷಯದ ಕುರಿತೂ ಪ್ರಶ್ನೆ ಎದುರಾಯಿತು. ಹಿಂದಿ ಸಿನಿಮಾ ಕ್ಷೇತ್ರದಲ್ಲಿ ಸ್ಟಾರ್ ನಟ–ನಟಿಯರು ತಮ್ಮ ಮಕ್ಕಳನ್ನು, ಆಪ್ತರನ್ನು ಬೆಳೆಸಲೇ ಹೆಚ್ಚು ಒತ್ತುನೀಡುತ್ತಾರೆ ಎನ್ನುವ ವಿಷಯವು ಲಾಗಾಯ್ತಿನಿಂದ ಚರ್ಚೆಗೆ ಒಳಗಾಗುತ್ತಿದೆ. ಹೀಗಾಗಿ ಈ ಪ್ರಶ್ನೆ ಹೊಸತೇನೂ ಅಲ್ಲ. ಆದರೆ, ರಕುಲ್ ಇದಕ್ಕೆ ಕೊಟ್ಟ ಉತ್ತರ ಮಾತ್ರ ಹೊಸತಾಗಿತ್ತು.

ಕಂಗನಾ, ಪ್ರಿಯಾಂಕಾ ಚೋಪ್ರಾ ತರಹದ ನಟಿಯರು ಕೂಡ ಬಾಲಿವುಡ್‌ನಲ್ಲಿನ ಸ್ವಜನಪಕ್ಷಪಾತದ ಕಹಿಯುಂಡವರು. ಆದರೆ, ರಕುಲ್ ಅಭಿಪ್ರಾಯವೇ ಬೇರೆ.

'ಒಬ್ಬ ವೈದ್ಯ ತನ್ನ ಮಗನೋ, ಮಗಳೋ ವೈದ್ಯಕೀಯ ವೃತ್ತಿ ಮಾಡಬೇಕೆಂದು ಬಯಸಿ, ಅದಕ್ಕೆ ನೀರೆರೆಯುವುದು ಸಹಜ. ಯಾವುದೇ ವೃತ್ತಿಪರರು ತಮ್ಮ ಮಕ್ಕಳು ತಾವು ಪಟ್ಟ ಕಷ್ಟ ಪಡಬಾರದು ಎಂದೇ ಕಾಳಜಿ ವಹಿಸುತ್ತಾರೆ. ಇದು ಹಿಂದಿ ಚಿತ್ರರಂಗಕ್ಕೂ ಅನ್ವಯಿಸುತ್ತದೆ. ನಾನು ಸ್ವಜನಪಕ್ಷಪಾತವನ್ನು ಸಮಸ್ಯೆಯಾಗಿ ನೋಡಲು ಇಷ್ಟಪಡುವುದಿಲ್ಲ. ಒಂದು ಕಾಲದಲ್ಲಿ ಸ್ಟಾರ್ ನಟರಾಗಲು ಅಥವಾ ಜನಪ್ರಿಯರಾಗಲು ಕಷ್ಟಪಟ್ಟಿರುವವರು ತಮ್ಮ ಮಕ್ಕಳ ಬದುಕಿನ ಹಾದಿ ಚೆನ್ನಾಗಿ ಇರಲಿ ಎಂದು ಬಯಸುವುದರಲ್ಲಿ ತಪ್ಪೇನೂ ಇಲ್ಲ. ತಮ್ಮ ಮಕ್ಕಳಿಗೆ ಅವರು ಸಲೀಸಾಗಿ ಅವಕಾಶ ಕೊಡಿಸಬಹುದು. ನಾನು ಈ ಇಡೀ ಪ್ರಕ್ರಿಯೆಯನ್ನು ಒಂದು ಸವಾಲೆಂದು ಭಾವಿಸುವೆ. ನನಗೆ ಸಿನಿಮಾದಲ್ಲಿ ನಟಿಸಲೆಂದು ಸ್ಕ್ರೀನ್ ಟೆಸ್ಟ್ ಮಾಡಿ ಅಥವಾ ಚರ್ಚೆಗೆ ಕರೆದು, ಆಮೇಲೆ ಬರಿಗೈಲಿ ಕಳುಹಿಸಿದರೆ ಅದನ್ನು ಕೆಟ್ಟ ದಿನ ಎಂದುಕೊಂಡು ನಾಳೆಗೆ ಎದುರು ನೋಡುವೆ' ಎಂದು ರಕುಲ್ ಕ್ರೀಡಾ ಮನೋಭಾವದ ಮಾತನ್ನಾಡಿದ್ದಾರೆ.

ಇತ್ತೀಚೆಗೆ ತೆರೆಕಂಡ 'ಇಂಡಿಯನ್ 2' ಬಹುಭಾಷಾ ಚಿತ್ರದಲ್ಲಿ ಅವರು ಅಭಿನಯಿಸಿದ್ದರು. ಕಮಲ್ ಹಾಸನ್ ನಾಯಕರಾಗಿದ್ದ ಈ ಸಿನಿಮಾವನ್ನು ಶಂಕರ್ ನಿರ್ದೇಶಿಸಿದ್ದು, ಜನರಿಂದ ನಿರೀಕ್ಷಿತ ಪ್ರತಿಕ್ರಿಯೆ ದೊರಕಲಿಲ್ಲ. ಶಂಕರ್ ಅವರಿಂದ ತಾವು ಸಾಕಷ್ಟು ಕಲಿತಿದ್ದಾಗಿ ರಕುಲ್ ಚಿತ್ರೀಕರಣದ ಸಂದರ್ಭದಲ್ಲಿ ಹೇಳಿದ್ದರು. ■